

# ಬಿಸಿಲಿನ ಬೆವರಿಳಿಸಿದ ಸುಪ್ರಿಯಾ ಸಾಹು

■ ರಾಹುಲ ಬೆಳಗಲಿ

ಹೆಚ್ಚುತ್ತಿರುವ ತಾಪಮಾನ. ಫ್ಯಾನ್ ಜೋರಾಗಿ ತಿರುಗಿದಷ್ಟು ಬಿಸಿ ಗಾಳಿ. ಎಸಿ, ಕೂಲರ್‌ಗಳಿದ್ದರೂ ಆಗದ ಪ್ರಯೋಜನ. ಮನೆಯಲ್ಲಿ ನೆಮ್ಮದಿಯಿಂದ ಕೂರಲು ಆಗದಷ್ಟು ಧಗೆ, ಹೊರಗಡೆ ನಿಶ್ಚಿಂತೆಯಿಂದ ಓಡಾಡಲು ಆಗದಷ್ಟು ಬಿಸಿಲು. ಇದು ಬೆಂಗಳೂರು, ಮುಂಬೈ, ಹೈದರಾಬಾದ್ ಕಥೆಯಷ್ಟೇ ಅಲ್ಲ, ದೇಶದ ಬಹುತೇಕ ಮಹಾನಗರ, ಊರು, ಗ್ರಾಮಗಳ ಪರಿಸ್ಥಿತಿ. ಸದ್ಯದ ಮಾರ್ಗವೆಂದರೆ, ಉರಿಬಿಸಿಲು ಸಹಿಸುವುದು ಮತ್ತು ಅದಕ್ಕೆ ಒಗ್ಗಿಕೊಳ್ಳುವುದು.

ಆದರೆ, ಇದಕ್ಕೆ ತಮಿಳುನಾಡಿನ ಜನರು ಅದರಲ್ಲೂ ಚೆನ್ನೈ ನಿವಾಸಿಗಳು ಸಿದ್ಧರಿಲ್ಲ. ‘ಸೂರ್ಯ ನೀನು ಉರಿದಷ್ಟು, ನಾವು ಬಿಳಿ ಬಣ್ಣ ಬಳಿಯುತ್ತೇವೆ’ ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ. ತಡ ಮಾಡದೇ, ತಾವು ವಾಸವಿರುವ ಮನೆ, ಕಟ್ಟಡ, ಕಚೇರಿಗಳ ಮಹಡಿ ಮೇಲೆ ಬಿಳಿ ಬಣ್ಣ ಬಳಿಯುವ ಕಾಯಕದಲ್ಲಿ ತೊಡಗಿದ್ದಾರೆ. ಇತರರಿಗೂ ಪ್ರೇರೇಪಿಸಿದ್ದಾರೆ. ಹೀಗೆ ಮಾಡಲು ಉಪಾಯ ಹೇಳಿಕೊಟ್ಟವರು, ಸ್ಫೂರ್ತಿ ತುಂಬಿದವರು ಮತ್ತು ಜೊತೆಯಾಗಿ ನಿಂತವರು ಸುಪ್ರಿಯಾ ಸಾಹು.

‘ಚೆನ್ನೈಯಲ್ಲಿ ಯಾವಾಗಲೂ ಬಿಸಿಲು ಏರುಗತಿಯಲ್ಲಿ ಇರುತ್ತದೆ. ಈಗಂತೂ ಸಹಿಸಲು ಆಗುತ್ತಿಲ್ಲ’ ಎಂದು ನಿವಾಸಿಗಳು ಹೇಳಿದಾಗ, ಸುಪ್ರಿಯಾ ಸಾಹು ಅವರು ತಮ್ಮ ತಂಡದ ಸದಸ್ಯರೊಂದಿಗೆ ಚರ್ಚಿಸಿ ಉಪಾಯ ಕಂಡುಕೊಂಡರು. ‘ಡಬ್ಬಿ ಪೂರ್ತಿ ಬಿಳಿ ಬಣ್ಣ ತುಂಬಿಸಿಕೊಂಡು, ನಿಮ್ಮ ಮನೆ ಅಥವಾ ಕಟ್ಟಡದ ಮಹಡಿಗೆ ಹೋಗಿ. ಅಲ್ಲಿ ಮಹಡಿಯ ನೆಲದ ಮೇಲೆ ಬಣ್ಣವನ್ನು ಸುರಿದು, ಸವರಿ ಎಲ್ಲೆಡೆ ಬಿಳಿ ಬಣ್ಣ ಆವರಿಸುವಂತೆ ಮಾಡಿ. ಇದರಿಂದ ಬಿಸಿಲಿನ ಪ್ರಮಾಣ ತಗ್ಗುತ್ತದೆ’ ಎಂದು ಹೇಳಿದರು. ಹೀಗೆ ಮಾಡುವುದರಿಂದ ಆಗುವ ಪ್ರಯೋಜನ, ಪರಿಣಾಮಗಳ ಬಗ್ಗೆ ವಿವರಿಸಿದರು.

ಆದರೆ, ಜನರು ಆರಂಭದಲ್ಲಿ ಅವರ ಮಾತುಗಳನ್ನು ನಂಬಲಿಲ್ಲ. ತಕ್ಷಣಕ್ಕೆ ಸ್ಪಂದಿಸಲಿಲ್ಲ. ‘ಮಹಡಿಯ ನೆಲಕ್ಕೆ ಬಣ್ಣ ಬಳಿದು ಏನು ಮಾಡುವುದಿದೆ? ಎಲ್ಲವೂ ಒಂದೇ ರೀತಿ ಇರುತ್ತವೆ’ ಎಂದು ವಾದಿಸಿದರು. ಆದರೆ, ಸುಪ್ರಿಯಾ ಸುಮ್ಮನಾಗಲಿಲ್ಲ. ಬಣ್ಣ ಬಳಿಯುವುದಕ್ಕೆಂದೇ ಕೆಲವರಿಗೆ ತರಬೇತಿ ನೀಡಿದರು. ಜೊತೆಗೆ ಜಾಗೃತಿಯೂ ಮೂಡಿಸಿದರು. ಕ್ರಮೇಣ ಕೆಲವೇ ದಿನಗಳಲ್ಲಿ ಮನೆ ಅಥವಾ ಕಟ್ಟಡಗಳಲ್ಲಿ ಶಾಖದ ಪ್ರಮಾಣ ಕಡಿಮೆ ಆಗಿರುವುದು ತೋರಿಸಿದರು.

ಕಟ್ಟಡದೊಳಗಿನ ತಾಪಮಾನವು 8 ಸೆಂಟಿಗ್ರೇಡ್‌ನಿಂದ 5 ಸೆಂಟಿಗ್ರೇಡ್‌ಗೆ ಕುಸಿಯಿತು. ಕೊಂಚ ತಂಪಾದ ಅನುಭೂತಿಯಾಯಿತು. ಮನೆಯಲ್ಲಿನ ಹಿರಿಯರು ಮತ್ತು ಮಕ್ಕಳು ನಿರಾಳರಾದರು. ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದ ಅಕ್ಕಪಕ್ಕದ ಬಡಾವಣೆಯವರು ಮತ್ತು ಸುತ್ತಮುತ್ತಲ ಊರಿನವರು ಬಿಳಿ ಬಣ್ಣ ಬಳಿಯುವ ಕಾರ್ಯಕ್ಕೆ ಕೈಜೋಡಿಸಿದರು. ಇದು ಒಂದರ್ಥದಲ್ಲಿ ದೊಡ್ಡ ಬದಲಾವಣೆಗೆ ಕಾರಣವಾಯಿತು.

‘ಮಹಡಿ ಮೇಲೆ ಬಿಳಿ ಬಣ್ಣ ಬಳಿಯುವುದರಿಂದ ಶಾಖದ ಪ್ರತಿಫಲನವಾಗುತ್ತದೆ. ಬಿಸಿಲು ಪ್ರಕರವಾದಷ್ಟು ಬಿಳಿ ಬಣ್ಣವು ಅದನ್ನು ನಿಯಂತ್ರಿಸುತ್ತದೆ. ಇದರಿಂದ ಮನೆ ಅಥವಾ ಕಟ್ಟಡದ ಒಳಭಾಗವು ತಂಪಾಗಿರುತ್ತದೆ. ಇದರಿಂದ ಫ್ಯಾನ್ ಅಥವಾ ಎಸಿ ಬಳಸುವ ಅಗತ್ಯತೆ ಕಡಿಮೆ ಆಗುತ್ತದೆ. ಇದು ಪರಿಸರಸ್ನೇಹಿ ಕಾರ್ಯವೂ ಹೌದು. ಒಂದರ್ಥದಲ್ಲಿ ಆರ್ಥಿಕ ಉಳಿತಾಯವು ಹೌದು’ ಎಂದು ಸುಪ್ರಿಯಾ ಸಾಹು ಹೇಳುತ್ತಾರೆ.

ಈ ಸುಪ್ರಿಯಾ ಸಾಹು. ಅವರು ತಮಿಳುನಾಡು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ. ಪರಿಸರ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಹವಾಮಾನದಲ್ಲಿ ಆಗುತ್ತಿರುವ ಏರುಪೇರು ಕುರಿತು ಅಧ್ಯಯನ ಮಾಡಿದ್ದಾರೆ. ಅವರ ಪ್ರಭಾವಶಾಲಿ ನಾಯಕತ್ವವನ್ನು ಪರಿಗಣಿಸಿ, ವಿಶ್ವಸಂಸ್ಥೆಯು ಅವರಿಗೆ ಕಳೆದ ವರ್ಷ 2025ರಲ್ಲಿ ‘ಚಾಂಪಿಯನ್ಸ್ ಆಫ್ ದಿ ಅರ್ಥ್’ ಪ್ರಶಸ್ತಿ ಪ್ರದಾನ ಮಾಡಿದೆ. ರಾಜ್ಯದಲ್ಲಿ ಹಸಿರು ವಾತಾವರಣ ಕಾಪಾಡುವಲ್ಲಿ ಅವರದ್ದು ದೊಡ್ಡ ಕೊಡುಗೆಯಿದೆ.

ಅರಣ್ಯ ವಿಸ್ತರಣೆ, ಜೌಗು ಪ್ರದೇಶ ಪುನರುಜ್ಜೀವನ, ಸುಸ್ಥಿರ ತಂಪಾಗಿಸುವಿಕೆ ಮತ್ತು ಸಮುದಾಯಚಾಲಿತ ಹವಾಮಾನ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವಲ್ಲಿ ಅವರು ಮುಖ್ಯ ಪಾತ್ರ ವಹಿಸಿದ್ದಾರೆ. ಜೊತೆಗೆ ಜನರಲ್ಲಿ ಪರಿಸರದ ಕುರಿತು ಕಾಳಜಿ ಮೂಡಿದೆ. ಯುವಜನರಿಗೆ ಉದ್ಯೋಗ ಅವಕಾಶವೂ ಲಭಿಸಿದೆ. ಸದಾ ಧಗಧಗಿಸುವ ವಾತಾವರಣ ತಂಪಾಗಿಸುವ ಕಾರ್ಯದಲ್ಲಿ ಅವರು ಹಲವರಿಗೆ ಸ್ಫೂರ್ತಿ ಆಗಿದ್ದಾರೆ.

ಪರಿಸರದಲ್ಲಿ ಆಗುತ್ತಿರುವ ಅನಿರೀಕ್ಷಿತ ಬದಲಾವಣೆ ಮತ್ತು ಹವಾಮಾನ ವೈಪರೀತ್ಯಗಳ ಬಗ್ಗೆ ನಿಗಾ ವಹಿಸಿರುವ ತಮಿಳುನಾಡು ಸರ್ಕಾರವು, ‘ತಮಿಳುನಾಡು ಗ್ರೀನ್ ಕ್ಲೈಮೇಟ್ ಕಂಪನಿ’ (ಟಿಎನ್‌ಜಿಸಿಸಿ) ಸ್ಥಾಪಿಸಿದೆ. ಇದರ ಭಾಗವಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ. ರಾಜ್ಯವನ್ನು ಹಸಿರುಮಯ ಮಾಡುವುದು, ಜೌಗು ಪ್ರದೇಶ ವೃದ್ಧಿಸುವುದು, ಕರಾವಳಿ ಪ್ರದೇಶ ಅಭಿವೃದ್ಧಿಪಡಿಸುವುದು ಮತ್ತು ಸಮತೋಲನ ಕಾಯ್ದುಕೊಳ್ಳುವುದು ಪ್ರಮುಖ ವಿಷಯಗಳಾಗಿವೆ. ಈ ಎಲ್ಲಾ ಕಾರ್ಯಯೋಜನೆಗಳು ಅಲ್ಲಿ ಭಾರಿ ಬದಲಾವಣೆಗೆ ಕಾರಣವಾಗಿವೆ.

2021ರಿಂದ ಈವರೆಗಿನ ಅವಧಿಯಲ್ಲಿ ರಾಜ್ಯದ ವಿವಿಧೆಡೆ ಲಕ್ಷಾಂತರ ಸಂಖ್ಯೆಯಲ್ಲಿ ಸಸಿ ಮತ್ತು ಗಿಡಗಳನ್ನು ನೆಟ್ಟು ಪೋಷಿಸಲಾಗುತ್ತಿದೆ. 7 ಸಾವಿರಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶವನ್ನು ಮೀಸಲು ಅರಣ್ಯಕ್ಕೆ ಘೋಷಿಸಲಾಗಿದೆ. ಅರಣ್ಯ, ವನ್ಯಜೀವಿ ಸಂರಕ್ಷಣಾ ಪ್ರದೇಶಗಳು ವಿಸ್ತಾರಗೊಂಡಿವೆ. ಕಾಂಡ್ಲಾ ಕಾಡಿನ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸಲಾಗಿದ್ದು, ಇದು ತಾಪಮಾನ ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

‘ನಾವು ಪರಿಸರವನ್ನು ಸಾಕಷ್ಟು ಹಾಳು ಮಾಡಿದ್ದೇವೆ. ಮುಂದಿನ ಪೀಳಿಗೆಗೆ ಅಪಾಯವನ್ನು ತಂದೊಡ್ಡಿದ್ದೇವೆ. ಈ ಭೂಮಿ ನಮಗಷ್ಟೇ ಅಲ್ಲ, ಮುಂದಿನ ಪೀಳಿಗೆಯವರಿಗೂ ಸೇರಿದ್ದು. ಪ್ರಾಣಿ, ಪಕ್ಷಿ ಮತ್ತು ಕೀಟಗಳಿಗೂ ಸೇರಿದ್ದು. ಅವರಿಗಾಗಿ ಪರಿಸರ ಸಮತೋಲನ ಕಾಯ್ದುಕೊಳ್ಳಬೇಕಿದೆ. ಭೂಮಿಗೆ ಮತ್ತು ಬದುಕಿಗೆ ಅಪಾಯ ಆಗದಂತೆ ನೋಡಿಕೊಳ್ಳಬೇಕಿದೆ’ ಎಂಬ ಕಾಳಜಿ ಸುಪ್ರಿಯಾ ಸಾಹು ಅವರದ್ದು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65